ಹಾಗೆಯೇ ಅದನ್ನು ಹಜಾರದ ಗೋಡೆಗೆ ತಗುಲಿಹಾಕಿದ್ದರು. ಅದು ಸ್ವಾಮೀಜಿಯವರು ಬರಿದಲೆಯಲ್ಲಿ, ಪದ್ಮಾಸನ ಹಾಕಿ ಕುಳಿತ ಭಂಗಿಯ ಚಿತ್ರ.

ನಮ್ಮ ತಂದೆ ನಾನು ಪಾಠಶಾಲೆಯಲ್ಲಿದ್ದಾಗಲೇ ನನ್ನಿಂದ 'ಶ್ರೀರಾಮಕೃಷ್ಣ ವಚನಾಮೃತ' ಮೊದಲಾದ ಕೃತಿಗಳನ್ನು ಓದಿಸಿದ್ದರು. ಅಲ್ಲಿಯ ಕೆಲವು ಭಕ್ತಿಗೀತೆಗಳನ್ನು ನನಗೆ ಗಟ್ಟಿ ಮಾಡಿಸಿದ್ದರು. ವೆಂಕಟರಾಮಯ್ಯನವರು ಕೆಲವು ಹಾಡುಗಳನ್ನು ತಾವೇ ಗುರುತಿಸಿ ಕೊಟ್ಟಿದ್ದರು.

ನಾನು ಕಾಲೇಜು ವ್ಯಾಸಂಗಕ್ಕೆ ಮೈಸೂರಿಗೆ ಬಂದ ಹೊಸದರಲ್ಲಿ ನಮ್ಮೂರಿನಲ್ಲಿಯೇ ನನ್ನ ಉಪನಯನವಾಯಿತು. ಆಗ್ಗೆ ನನ್ನ ಆಸಕ್ತಿ ಗಮನಿಸಿದ ನನ್ನ ಒಬ್ಬ ಮಿತ್ರ ಸ್ವಾಮೀಜಿಯವರ Inspired Talk (ಸ್ಫೂರ್ತಿವಾಣಿ) ಎಂಬ ಪುಸ್ತಕವನ್ನು ನನಗೆ ಉಡುಗೊರೆಯಾಗಿ ನೀಡಿದನು. ಅದನ್ನು ನಾನು ಓದಿದ ಮೇಲೆ ನನಗೆ ಸ್ವಾಮೀಜಿಯವರ ವಿಚಾರ ಇನ್ನಷ್ಟು ತಿಳಿಯಬೇಕು ಎನ್ನಿಸಿತು. ಮದರಾಸಿನ ರಾಮಕೃಷ್ಣ ಆಶ್ರಮದೊಂದಿಗೆ ನೇರವಾಗಿ ಪತ್ರವ್ಯವಹಾರ ನಡೆಸಿ, ಸ್ವಾಮೀಜಿಯವರ ಕೆಲವು ಭಾವಚಿತ್ರಗಳನ್ನೂ ಪುಸ್ತಕಗಳನ್ನೂ ವಿ.ಪಿ.ಪಿ. ಮೂಲಕ ತರಿಸಿಕೊಂಡೆ. ಹಾಗೆ ತರಿಸಿಕೊಂಡ ಪುಸ್ತಕಗಳಲ್ಲಿ Power of the Mind ಎಂಬ ಪುಸ್ತಕ ನನ್ನನ್ನು ಬಲವಾಗಿ ಆಕರ್ಷಿಸಿತು. ಹಾಗೆ ತರಿಸಿಕೊಂಡ ಚಿತ್ರಗಳಲ್ಲಿ ಸುಪರಿಚಿತವಾದ ರಾಮಕೃಷ್ಣರ ಕುಳಿತ ಭಂಗಿಯ ಚಿತ್ರವೂ ಒಂದು. ನನ್ನ ಕಾಲೇಜು ವ್ಯಾಸಂಗದುದ್ದಕ್ಕೂ ನಾನು ವಾಸವಿದ್ದ ಮನೆಯ ಮಲಗುವ ಕೋಣೆಯಲ್ಲಿ, ತಲೆದೆಸೆಗೆ ಅದನ್ನು ಹಾಕಿಕೊಂಡಿದ್ದೆ. ನನ್ನ ಮನಸ್ಸು ಕೆಟ್ಟದ್ದನ್ನು ಯೋಚಿಸುವಾಗ, ನನ್ನಲ್ಲಿ ನಿರ್ವಿಣ್ಣತೆಯ ಭಾವ ತುಂಬಿಕೊಂಡಾಗ ನಾನು ಚಿತ್ರದ ಎದುರು ಕೈಮುಗಿದು ನಿಂತು ನನ್ನ ತಪ್ಪೊಪ್ಪಿಗೆ ಸಲ್ಲಿಸುತ್ತಿದ್ದೆ.

ನಾನು ಕಾಲೇಜು ಅಧ್ಯಾಪಕನಾದ ಮೇಲೆ ಕೂಡ Inspired Talks ನನ್ನನ್ನು ಮೋಹಿಸುತ್ತಲೇ ಇತ್ತು. ಪ್ರಶ್ನೆಪತ್ರಿಕೆಯಲ್ಲಿ ಭಾಷಾಂತರಕ್ಕೆ ಎಂದು ಅಲ್ಲಿಂದ ವಾಕ್ಯಪುಂಜಗಳನ್ನು ಆರಿಸಿ ಕೊಟ್ಟ ನೆನಪೂ ನನಗಿದೆ. ಈಚೆಗೆ ಭಾರತೀಯ ವಿದ್ಯಾಭವನದ ಒಂದು ಕಿರುಹೊತ್ತಿಗೆ ಗ್ರಂಥಮಾಲೆಗಾಗಿ, ಪುಸ್ತಕವೊಂದನ್ನು ಭಾಷಾಂತರಿಸಿ ಕೊಡುವ ಸಂದರ್ಭ ಬಂದಾಗ ಹತ್ತಾರು ಪುಸ್ತಕಗಳಲ್ಲಿ ಒಂದನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ಸಂಪಾದಕರು ನನಗೇ ಬಿಟ್ಟರು. ನಾನು ಸ್ವಾಮೀಜಿಯವರ Our Mother Land ಪುಸ್ತಕವನ್ನು ಆಯ್ಕೆಮಾಡಿಕೊಂಡೆ. ಆಗ ನನಗೆ ಆದ ಸಂತೋಷ, ಪಡೆದ ತಿಳಿವಳಿಕೆ ಅತಿಶಯವಾದವು.

ಇನ್ನೂ ಸ್ವಲ್ಪ ಈಚೆಗೆ ಮೈಸೂರಿನಲ್ಲಿ ಒಂದು ದತ್ತಿ ಉಪನ್ಯಾಸ ನೀಡುವ ಅವಕಾಶ ಬಂದು, ಅದಕ್ಕೆ 'ಸಮಾಧಾನದ ಸಾವು: ಕೆಲವು ನೈಜಘಟನೆಗಳು' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡೆ. ನನ್ನಲ್ಲಿ ತಕ್ಕ ಮಟ್ಟಿಗೆ ವಿಷಯ ಸಂಗ್ರಹವಿತ್ತು. ಅಸ್ಪಷ್ಟವಾಗಿ ಸ್ವಾಮೀಜಿಯವರ ಮೃತಿಯ ವಿಚಾರ ತಿಳಿದಿದ್ದ ನಾನು ಅದನ್ನು ವಿವರವಾಗಿ ತಿಳಿಯಬೇಕೆಂದು ಗ್ರಂಥಭಂಡಾರದಲ್ಲಿ ಅವರ ವಿಸ್ತೃತ ಜೀವನ ಚರಿತೆ ಹುಡುಕಿ ತೆಗೆದು, ಬೇಕಾದ ವಿಷಯ ಸಂಗ್ರಹಿಸಿದೆ.

ಅಸಾಧಾರಣ ದೇಶಪ್ರೇಮ, ಲೋಕಸಂಗ್ರಹ ಕಾರ್ಯದ ಪರಿಶ್ರಮ, ಅಧ್ಯಾತ್ಮ – ಲೋಕವ್ಯವಹಾರಗಳನ್ನು ಸಮಾನವಾಗಿ ಕಂಡ ಜೀವನ ದೃಷ್ಟಿ, ಸಾರ್ಥಕ ಜೀವನೋತ್ಸಾಹವನ್ನು ಪುಟಿದೆಬ್ಬಿಸುವ ಉತ್ಸಾಹಭರಿತ ವಾಗ್ಮಿತೆ – ಇವುಗಳಿಂದಾಗಿ ಸ್ವಾಮೀಜಿ ಅವರು ನನಗೆ ಬಹುವಾಗಿ ಇಷ್ಟವಾಗಿದ್ದಾರೆ.

**– ಟಿ.ವಿ. ವೆಂಕಟಾಚಲ ಶಾಸ್ತ್ರೀ, ಮೈಸೂರು**

---

ಸ್ವಾಮಿ ವಿವೇಕಾನಂದರ ಮೂರು ತೆರನ ಭಾವಚಿತ್ರಗಳನ್ನು ನಾವು ಸಾಮಾನ್ಯವಾಗಿ ನೋಡುತ್ತೇವೆ. ಒಂದು ದೇಶಪ್ರೇಮಿಯ ಚಿತ್ರ. ಕಾವಿಯ ಬಟ್ಟೆಯನ್ನುಟ್ಟು, ಅದೇ ಬಣ್ಣದ ಬಟ್ಟೆಯನ್ನು ಹೊದೆದು ದಂಡವನ್ನು ಹಿಡಿದು, ಧೀರ ನಿಲುವಿನಲ್ಲಿ ನಿಂತ ಬೋಳು ಮಂಡೆಯ ಭವ್ಯ ವ್ಯಕ್ತಿಯನ್ನು ಅಲ್ಲಿ ಕಾಣುತ್ತೇವೆ. ಸ್ವಾಮಿ ವಿವೇಕಾನಂದರು ತಮ್ಮ ತಾಯ್ನಾಡಿನ ಮೇಲಣ ಅಪಾರ ಪ್ರೇಮದಿಂದ, ಈ ದೇಶದ ಉದ್ದಗಲಗಳನ್ನು ಬರಿಗಾಲಿನಲ್ಲಿ ಸುತ್ತಿ, ಅದರ ಹೃದಯದ ಮಿಡಿತಗಳನ್ನು ಅರಿತ ದಿನಗಳ ಚಿತ್ರ. ಎರಡನೆಯದು ತಲೆಗೆ ಪೇಟ ಸುತ್ತಿ ಕೈಕಟ್ಟಿ ವೇದಾಂತ ತತ್ತ್ವಗಳನ್ನು ಮೊಳಗಲು ನಿಂತ ಧೀರ ಭಂಗಿ. ಮೂರನೆಯದು ಕಮಲದ ದಳಗಳಂತಹ ತಮ್ಮ ಕಣ್ಣುಗಳನ್ನು ಮುಚ್ಚಿ ಸಾಕ್ಷಾತ್ ಶಿವನಂತೆ ಸಮಾಧಿಯಲ್ಲಿ ಮಗ್ನರಾಗಿ ಕುಳಿತ ಚಿತ್ರ. ಸ್ವಾಮಿ ವಿವೇಕಾನಂದರ ಬಹುಮುಖ ವ್ಯಕ್ತಿತ್ವಗಳಲ್ಲಿ ಅತ್ಯಂತ ಮುಖ್ಯವಾದ ಈ ಮೂರು ವ್ಯಕ್ತಿತ್ವಗಳನ್ನು ಈ ಮೂರು ಚಿತ್ರಗಳು ಎತ್ತಿ ತೋರಿಸುತ್ತವೆ.

ಸ್ವಾಮಿ ವಿವೇಕಾನಂದರು ಹುಟ್ಟಿದ್ದು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅಲ್ಲೋಲಕಲ್ಲೋಲವಾಗಿದ್ದ ಒಂದು ದೇಶದಲ್ಲಿ. ತನ್ನ ನೆಲೆಯೇನು, ತನ್ನ ಪರಂಪರೆ ಎಷ್ಟು ಬೆಲೆಯುಳ್ಳದ್ದು ಮತ್ತು ತನ್ನ ಭವಿಷ್ಯ ಎಂತಹ ಮಹಿಮೆಯಿಂದ ಕೂಡಿದ್ದು ಎನ್ನುವುದರ ಕಲ್ಪನೆ ಸ್ವಲ್ಪವೂ ಇರದ ಹಿಂದೂ ಸಮಾಜದಲ್ಲಿ. ತಾನು ಹುಟ್ಟಿದ ದೇಶವನ್ನೂ, ತಾನು ಬೆಳೆದ ಸಮಾಜವನ್ನೂ ಮೇಲಕ್ಕೆತ್ತಲೇಬೇಕಾದ ಭಾರವನ್ನು ಹೊತ್ತುಕೊಂಡೇ ಸ್ವಾಮಿ ವಿವೇಕಾನಂದರು ಈ ದೇಶದಲ್ಲಿ ಹುಟ್ಟಿದರು. ಅಂತಹ ಒಂದು ಕೆಲಸದಲ್ಲಿ ಏಕಾಂಗಿಯಾಗಿ ಹೋರಾಡುತ್ತಿದ್ದಂತೆ ಅವರು ಕಾಣಿಸಿಕೊಂಡರೂ ಅವರ ಹಿಂದೆ ಶಕ್ತಿಯ ಒಂದು ಸಮುದ್ರವೇ ಇದ್ದದ್ದು ನಮ್ಮ ಗಮನದಿಂದ ಮರೆಯಾಗುವುದಿಲ್ಲ. ತಮ್ಮ ಜೀವನದ ದೀರ್ಘಕಾಲದ ತಪಸ್ಸನ್ನು ಇವರ ಸಾಹಸಕ್ಕೆ ಧಾರೆಯೆರೆದ ಶ್ರೀರಾಮಕೃಷ್ಣ ಪರಮಹಂಸರೇ ಆ ಶಕ್ತಿ ಸಮುದ್ರ. ಸ್ವಾಮಿ ವಿವೇಕಾನಂದರು ಆ ಶಕ್ತಿ ಸಮುದ್ರದಿಂದ ಮೇಲೆದ್ದ ಒಂದು ದೊಡ್ಡ ಅಲೆ. ಅಲೆಯನ್ನೂ ಸಮುದ್ರವನ್ನೂ ಒಟ್ಟಿಗೆ ನೋಡಿದಾಗಲೇ ನಮಗೆ ಅವರ ಬಾಳಿನ ಪೂರ್ಣ ಪರಿಚಯ ದೊರಕುವುದು.

ಸ್ವಾಮೀಜಿಯ ದೇಶಾಭಿಮಾನ ಅನ್ಯಾದೃಶವಾದದ್ದು. 'ಭಾರತದ ಭವಿಷ್ಯ' ಎನ್ನುವ ತಮ್ಮ ಒಂದು ಉಪನ್ಯಾಸವನ್ನು ಅವರು ಹೀಗೆ ಪ್ರಾರಂಭಿಸಿದ್ದಾರೆ: "ಎಲ್ಲಿ ಜ್ಞಾನ, ಇತರ ದೇಶಗಳಿಗೆ ಹೋಗುವ ಮೊದಲು, ತನ್ನ ಮನೆಯನ್ನು ಕಟ್ಟಿತೋ, ಆ ಪ್ರಾಚೀನ ನಾಡು ಇದು. ಇಲ್ಲೇ, ಈ ಭಾರತದಲ್ಲೇ ಅಧ್ಯಾತ್ಮವು ಲೌಕಿಕ ಕ್ಷೇತ್ರದಲ್ಲಿ ಸಾಗರದಂತೆ ಉರುಳುವ ನದಿಗಳಾಗಿ ವ್ಯಕ್ತಗೊಂಡದ್ದು. ಇಲ್ಲೇ ಸನಾತನ ಹಿಮಾಲಯವು ಹಿಮ ಮುಚ್ಚಿದ ಶಿಖರಗಳಾಗಿ

ಎದ್ದು, ಸ್ವರ್ಗದ ರಹಸ್ಯಗಳನ್ನು ಭೇದಿಸುವಂತೆ ದೃಷ್ಟಿ ನೆಟ್ಟು ನಿಂತಿರುವುದು. ಈ ಭಾರತದ ನೆಲವನ್ನೇ ಮಹಾ ಸಾಧುಸಂತರು ತುಳಿದದ್ದು; ಇಲ್ಲೇ ಪ್ರಪ್ರಥಮವಾಗಿ ಮಾನವನ ಸ್ವಭಾವವನ್ನೂ ಅವನ ಅಂತರಂಗದ ಜಗತ್ತನ್ನೂ ಕುರಿತು ಅನ್ವೇಷಣೆ ನಡೆದದ್ದು. ಇಲ್ಲೇ ಮೊತ್ತ ಮೊದಲ ಬಾರಿಗೆ ಆತ್ಮದ ಅಮರತ್ವ, ಭಗವಂತನ ಅಸ್ತಿತ್ವ, ಪ್ರಕೃತಿಯಲ್ಲೂ ಮಾನವನಲ್ಲೂ ಭಗವಂತನ ವ್ಯಾಪಕತೆ – ಇವುಗಳನ್ನು ಕುರಿತು ಸಿದ್ಧಾಂತಗಳು ಮಂಡಿತವಾಗಿದ್ದು. ಧರ್ಮ ಮತ್ತು ತತ್ತ್ವಗಳು ತಮ್ಮ ಅತ್ಯುನ್ನತ ಶಿಖರಗಳನ್ನು ಮುಟ್ಟಿದುದು ಇಲ್ಲೇ....”

ಮುಂದುವರೆದು ಸ್ವಾಮೀಜಿ ಹೇಳುತ್ತಾರೆ, ತಾವು ಈ ಮಾತುಗಳನ್ನು ಹೇಳುತ್ತಿರುವುದು ಸುಮ್ಮನೆ ಹಿಂದಿನದನ್ನು ಹೊಗಳುವುದಕ್ಕೆ ಅಲ್ಲ ಎಂದು. ಅವರ ಉದ್ದೇಶ ಭರತಖಂಡದ ಹಿಂದಿನ ಸಾರವನ್ನು ಸೆಳೆದು ಮಹತ್ತರವಾದ ಭಾರತವೊಂದನ್ನು ರೂಪಿಸಬೇಕು ಎಂಬುದು. ಅವರ ಇತಿಮಿತಿಯಿಲ್ಲದ ದೇಶಭಕ್ತಿ ಅವರಿಂದ ಈ ಮಾತುಗಳನ್ನು ಆಡಿಸಿದವು.

ಶ್ರೀರಾಮಕೃಷ್ಣರೂ, ಸ್ವಾಮಿ ವಿವೇಕಾನಂದರೂ ಭಗವಂತನ ಅವತಾರಗಳೋ ಅಲ್ಲವೋ ಎಂಬುದರ ಚರ್ಚೆ ಅನಗತ್ಯ. ಅದನ್ನು ನಿರ್ಣಯಿಸುವ ಶಕ್ತಿ ಸಾಮಾನ್ಯರಾದ ನಮಗೆ ಇಲ್ಲ. ದೇವಪುರುಷರನ್ನೂ, ಅವರ ಅತಿಮಾನುಷ ವ್ಯಕ್ತಿತ್ವಗಳನ್ನೂ ಕಾಣುವುದಕ್ಕೆ ಒಂದೇ, ದೈವಿಕವಾದ ಕಣ್ಣುಗಳನ್ನು ನಾವೇ ಪಡೆದಿರಬೇಕು, ಇಲ್ಲವೇ, ಶ್ರೀಕೃಷ್ಣನು ಅರ್ಜುನನಿಗೆ ಕೊಟ್ಟಂತೆ ಅಂತಹ ಯೋಗದ ಕಣ್ಣುಗಳನ್ನು ಯಾರಾದರೂ ನಮಗೆ ಕೊಡಬೇಕು. ವ್ಯವಹಾರದ ಈ ಸಾಧಾರಣ ಜಗತ್ತಿನಲ್ಲಿ ಅಂತಹ ಅಸಾಧಾರಣ ಕಾರ್ಯ ನಡೆಯುವ ಸಂಭವ ಕಡಿಮೆ. ಆದರೆ ಒಂದಂತೂ ನಮ್ಮ ಕಣ್ಣಿಗೆ ಕಟ್ಟಿದಂತೆ ಉಳಿಯುತ್ತದೆ. ಅದು ಮಣ್ಣಿನಿಂದ ಮೂಡಿದ ಈ ಮೂರ್ತಿಗಳು ಮುಗಿಲಿನವರಿಗೂ ಬೆಳೆದು ನಿಂತದ್ದು. ಸಾಧನೆಯಿಂದ, ತಪಸ್ಸಿನಿಂದ, ಮಾನವ ಪ್ರೇಮದಿಂದ, ಭಗವಂತನ ಹಂಬಲದಿಂದ, ಭಗವಂತನ ದರ್ಶನದಿಂದ ತಮಗೆ ದೊರೆತ ಆನಂದವನ್ನು ಇತರರಿಗೆ ಹಂಚಿದ ರೀತಿಯಿಂದ ಅವರು ಅತಿ ಮಾನವತನಕ್ಕೆ ಬೆಳೆದು ನಿಂತಿದ್ದನ್ನು ನಾವು ಕಣ್ಣಾರೆ ಕಾಣುತ್ತೇವೆ.

– ಡಾ. ಪ್ರಭುಶಂಕರ, ಮೈಸೂರು

## ನಾನು ಸ್ವಾಮೀಜಿಯವರನ್ನೇ ನನ್ನ ಗುರುವಾಗಿ ಸ್ವೀಕರಿಸಿದ್ದೇನೆ!

ನಮ್ಮ ಸನಾತನ ಹಿಂದೂ ಧರ್ಮದಲ್ಲಿ ಅನಂತ ಕಾಲದಿಂದ ಸಾವಿರಾರು ಋಷಿ ಮುನಿಗಳು, ಸಂತರು, ಅವತಾರ ಪುರುಷರು ಅವತರಿಸಿ, ಅನೇಕರ ಮೇಲೆ ತಮ್ಮ ಪ್ರಭಾವ ಮತ್ತು ಸ್ಫೂರ್ತಿಯನ್ನು ನೀಡಿ ಅವರನ್ನು ತಮ್ಮಲ್ಲಿ ಒಬ್ಬರನ್ನಾಗಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಅಂಥವರಲ್ಲಿ ಅವತಾರವರಿಷ್ಠ ಶ್ರೀರಾಮಕೃಷ್ಣ ಪರಮಹಂಸರು ಮತ್ತು ಅವರ ಪಟ್ಟ ಶಿಷ್ಯ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು. ಶ್ರೀರಾಮಕೃಷ್ಣರ ಪ್ರಭಾವದಿಂದ ನರೇಂದ್ರನು ಸ್ವಾಮಿ ವಿವೇಕಾನಂದರಾಗಿ ಮಾರ್ಪಟ್ಟರು. ಅನಂತರದ ದಿನಗಳಲ್ಲಿ ಸ್ವಾಮಿ ವಿವೇಕಾನಂದರ ಸ್ಫೂರ್ತಿಯಿಂದ ಅಸಂಖ್ಯಾತರು ಪರಿವರ್ತಿತರಾದರು. ಅವರಲ್ಲಿ ನಾನೂ ಒಬ್ಬ.

ನನ್ನ ಜೀವನದಲ್ಲಿ ಅವರಾಡಿದ ಮಾತು, ‘I am voice without a form’ ( ನಾನೊಂದು ರೂಪವಿಲ್ಲದ ಧ್ವನಿ) ಅನ್ವಯಿಸುತ್ತದೆ. ಏಕೆಂದರೆ ಅವರಾಡಿದ ಒಂದೊಂದು ಮಾತುಗಳು ಬಾಂಬುಗಳು. ಈ ಬಾಂಬುಗಳು ಮನುಷ್ಯನನ್ನು ಸುಡದೆ, ಅವನಲ್ಲಿರುವ ದೌರ್ಬಲ್ಯ, ಕೀಳರಿಮೆ, ಅಜ್ಞಾನ ಇತ್ಯಾದಿಗಳನ್ನು ಸುಟ್ಟುಹಾಕಿ, ಧೈರ್ಯ, ಜ್ಞಾನ, ಆತ್ಮವಿಶ್ವಾಸ – ಇವುಗಳನ್ನು ಹೊರಸೂಸುವಂತೆ ಮಾಡುತ್ತಿವೆ. ಹೇಗೆ ಚಿನ್ನ ಬೆಂಕಿಯಲ್ಲಿ ಸುಟ್ಟು ಅಪ್ಪಟ ಚಿನ್ನವಾಗುತ್ತದೆಯೋ ಹಾಗೆ, ನಾನು ಮೊದಲಿಗೆ ಕುವೆಂಪು ಲಿಖಿತ ‘ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ’ಯಿಂದ ಆಕರ್ಷಿತನಾದೆ. ನಂತರ ‘ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ’ ಇತ್ಯಾದಿ ಅನೇಕ ಪುಸ್ತಕಗಳನ್ನು ಓದಿದೆ. ನನಗೆ ಮೊದಲಿನಿಂದ ಆತ್ಮವಿಶ್ವಾಸ, ಧೈರ್ಯ ಕಡಿಮೆ; ಇದಲ್ಲದೆ ಆಧ್ಯಾತ್ಮಿಕತೆಯ ಬಗ್ಗೆ ಎಳ್ಳಷ್ಟೂ ಜ್ಞಾನವಿರಲಿಲ್ಲ. ಈ ಪುಸ್ತಕಗಳನ್ನು ಓದುತ್ತ ಹೋದಂತೆ ಸ್ವಾಮೀಜಿಯವರ ಅನೇಕ ನುಡಿಗಳು ನನ್ನ ಮನಸ್ಸಿನಲ್ಲಿ ದೊಡ್ಡ ಕೋಲಾಹಲವನ್ನೇ ಎಬ್ಬಿಸಿದವು. “ನೀನು ದೇಹವಲ್ಲ, ಆತ್ಮಸ್ವರೂಪಿ, ಅಮೃತಪುತ್ರ, ನಾನು ಹೇಳುತ್ತಿರುವೆನೆಂದು ನೀನು ನಂಬಬೇಡ, ಸ್ವತಃ ನೀನು ಪರೀಕ್ಷಿಸಿ ನಂತರ ತೀರ್ಮಾನಿಸು” – ಸ್ವಾಮೀಜಿಯವರ ಇಂತಹ ಅನೇಕ ನುಡಿಗಳನ್ನು ಯಾರು ತಾನೇ ಕೇಳಿಲ್ಲ!

ಒಟ್ಟಿನಲ್ಲಿ ಸ್ವಾಮೀಜಿಯವರೇ ನನ್ನ ಬದುಕನ್ನು ತಿರುಗಿಸಿಬಿಟ್ಟರು. ಅವರ ಸಮಗ್ರ ಜೀವನವನ್ನು ಅಧ್ಯಯನ ಮಾಡುತ್ತ ಹೋದಂತೆ, ನನ್ನ ಜೀವನ ಪರಿವರ್ತನೆಯಾಗುತ್ತ ಹೋಯಿತು. ನನ್ನ ಆತ್ಮವಿಶ್ವಾಸ, ಧೈರ್ಯ ಇತ್ಯಾದಿ ಪೂರ್ಣವಾಗಿ ಅಲ್ಲದಿದ್ದರೂ ೧೦೦% ರಲ್ಲಿ ೭೫% ಆಗಿದೆ. ನನ್ನ ಪ್ರಯತ್ನ ೧೦೦% ಆಗುವ ಕಡೆಗೆ ನಡೆದಿದೆ. ಸ್ವಾಮೀಜಿಯವರ ಪುಸ್ತಕಗಳಿಂದಲೇ ನನಗೆ ಧ್ಯಾನ, ಜಪ, ಆಧ್ಯಾತ್ಮಿಕತೆಯ ಆಳ ಅಗಲ, ಜೀವನದಲ್ಲಿ ಅದರ ಮಹತ್ವ, ಸನಾತನ ಹಿಂದೂ ಧರ್ಮದ ಅನೇಕ ಮಹತ್ವದ ವಿಷಯಗಳು, ನಮ್ಮ ರಾಷ್ಟ್ರಕ್ಕೆ ನಾನು ಮಾಡಬೇಕಾದ ನನ್ನ ನಿಜವಾದ ಕರ್ತವ್ಯ, ‘ಜೀವರಲ್ಲಿ ಶಿವ ಸೇವೆ’ – ಇಂತಹ ಅನೇಕ ವಿಷಯಗಳನ್ನು ನಾನು ತಿಳಿದುಕೊಂಡು, ನನ್ನ ಜೀವನದಲ್ಲಿ ಅಳವಡಿಸಿಕೊಂಡೆ. ಆದರಿಂದ ನಾನು ಸ್ವಾಮೀಜಿಯವರನ್ನು ನನ್ನ ಗುರುವಾಗಿ ಸ್ವೀಕರಿಸಿ, ನನ್ನ ಶಕ್ತಿಗೆ ಅನುಸಾರವಾಗಿ ಅವರು ಹೇಳಿಕೊಟ್ಟ ದಾರಿಯಲ್ಲಿ ಹೋಗಲು ಪ್ರಯತ್ನಿಸುತ್ತಿದ್ದೇನೆ. ಋಣಾತ್ಮಕ ಮನೋಭಾವವನ್ನು ತ್ಯಜಿಸಿ, ಧನಾತ್ಮಕ ಮನೋಭಾವದ ಕಡೆಗೆ ಹೋಗಲು ನನ್ನನ್ನು ನನ್ನ ಗುರುವಾದ ಸ್ವಾಮೀಜಿಯವರು ಪ್ರೇರಣೆ ನೀಡುತ್ತಿರುವರು. ನೊಬೆಲ್ ಪ್ರಶಸ್ತಿ ವಿಜೇತ ಫ್ರೆಂಚ್ ಸಾಹಿತಿ ರೊಮಾ ರೋಲಾ ಸ್ವಾಮೀಜಿಯವರ ಉಪದೇಶಗಳ ಬಗ್ಗೆ, “ಅವರ ಮಾತುಗಳನ್ನು ದೇಹಾದ್ಯಂತ ವಿದ್ಯುತ್ ಸಂಚಾರದ ರೋಮಾಂಚನದ ಅನುಭವವಾಗದೇ ನನಗೆ ಮುಟ್ಟಲು ಸಾಧ್ಯವಾಗುತ್ತಿಲ್ಲ” ಎಂದು ಹೇಳಿದ್ದಾರೆ. ಇದು ಎಷ್ಟು ಸತ್ಯ ಎಂದೆನಿಸುತ್ತದೆ.

– ರಾಜೇಶ. ಎನ್. ಪತ್ತಾರ, ಬೆಳಗಾವಿ